**ಆರ್ ಎ ನಂ. 8/2023**
**ಪಿ. ಡಬ್ಲ್ಯೂಃ 01**

**ದಿಃ 13-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲೆ ಸಾಕ್ಷಿ ವಿಚಾರಣೆಗೆ ಅವಕಾಶ ನೀಡಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಸಿ ಬಿ ಕೆ ಪರ ಶ್ರೀ ಎಂ ಎಚ್ ಜೆ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ.

ಫೋಟೋದ ದೃಡಿಕೃತ ಪ್ರತಿಯನ್ನು ನಿಪಿ-1 ಎಂದು ಗುರುತಿಸಲಾಯಿತು, ಆಧಾರ ಕಾರ್ಡನ ಮೂಲ ಪ್ರತಿಯನ್ನು ಜರಾಕ್ಸ ಪ್ರತಿಯೊಂದಿಗೆ ತಾಳೆ ಮಾಡಿ ಮೂಲ ಪ್ರತಿಯನ್ನು ಮರಳಿಸಲಾಯಿತು, ದೃಡಿಕೃತ ಪ್ರತಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ನೋಂದಣಿ ಆಗಿದ ಬಕ್ಷಿಸ ಪತ್ರವನ್ನು ನಿಪಿ-3, ಎಫ್ ಡಿ ಪಿ ನಂ 1/2017 ರ ಆರ್ಡರ ಶೀಟನ್ನು ನಿಪಿ-4, ಅಂತಿಮ ಡಿಕ್ರಿ ಪ್ರತಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ ಎಂ ಸಿ ವಕೀಲರಿಂದಃ**

ನಾನು ಖಾಯಂ ತರೀಖ ಅಣ್ಣಿಗೇರಿಯಲ್ಲಿ ವಾಸವಾಗಿರುತ್ತೇನೆ. ಅಮೀನಾಬಿ ಇವರು ನಮ್ಮ ತಂದೆಯ ಅಕ್ಕ. ದಿನಾಂಕ **12.02.2024** ರಂದು ಅಮೀನಾಬಿ ಮೃತಪಟ್ಟಿದ್ದಾರೆ. ಅಮೀನಾಬಿಯ ವಾರಸಾ ಪ್ರಮಾಣ ಪತ್ರ ನಮ್ಮ ಊರಲ್ಲಿ ಇರುತ್ತದೆ. ಬಕ್ಷಿಸ ಪತ್ರದ ಆಸ್ತಿ ಮಿಶ್ರಿಕೋಟಿಯಲ್ಲಿ ಇರುತ್ತದೆ. ಸದರಿ ಆಸ್ತಿಯ ನಂಬರ ನನಗೆ ಗೊತ್ತಿಲ್ಲ. ಬಕ್ಷಿಸ ಪತ್ರವನ್ನು ಹುಬ್ಬಳ್ಳಿಯಲ್ಲಿ ವಕೀಲರು ಬರೆದಿರುತ್ತಾರೆ. ಬಕ್ಷಿಸ ಪತ್ರಕ್ಕೆ ಅದನ್ನು ಬರೆದ ವಕೀಲರು ಸಹಿ ಮಾಡಿಲ್ಲ. ಬಕ್ಷಿಸ ಪತ್ರಕ್ಕೆ ಸಾಕ್ಷಿದಾರ ಎಂದು ಇಮಾಮಸಾಬ ದರವಾನ ಮತ್ತು ಹಸನಸಾಬ ಚಿಕವಾಡಿಗೆ ಸಹಿ ಮಾಡಿರುತ್ತಾರೆ. ಬಕ್ಷಿಸ ಪತ್ರಕ್ಕೆ ಸಹಿ ಮಾಡಿದರು ಸಾಕ್ಷಿದಾರರು ಅಣ್ಣಿಗೇರಿಯವರು. ಸದರಿಯವರು ಮಿಶ್ರಿಕೋಟಿ ಗ್ರಾಮದವರು ಅಲ್ಲ. ಬಕ್ಷಿಸ ಪತ್ರ ಬರೆಯಲು ನಾನೆ ಮಾಹಿತಿ ನೀಡಿದ್ದೇನೆ. ಬಕ್ಷಿಸ ಪತ್ರಕ್ಕೆ ನಮ್ಮ ಅತ್ತೆಯವರು ಹೇಳಿದ ಪ್ರಕಾರ ನಾನು ಮಾಹಿತಿ ಕೊಟ್ಟಿರುತ್ತೇನೆ. ಬಕ್ಷಿಸ ಪತ್ರ ಬರೆಯುವಾಗ ದಾಖಲೆಗಳನ್ನು ನೋಡಿದ್ದಿರಿ ಎಂದರೆ ಸಾಕ್ಷಿ ಅವರಿಗೆ ಎಲ್ಲವೂ ಗೊತ್ತಿತ್ತು ಎನ್ನುತ್ತಾರೆ. ದಾವಾ ಆಸ್ತಿ ಹಾಗೂ ಇತರೆ ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆ ಚಾಲ್ತಿಯಲ್ಲಿತ್ತು ಅಂದರೆ ನಿಜ. ಜಾಗ ಕೊಡುವಂತೆ ದಾವೆ ನಡೆದಿತ್ತು. ದಾವೆಯಲ್ಲಿ ನಮಗೆ ಅರ್ಧ ಗುಂಟೆ ಕೊಡುವಂತೆ ಆದೇಶವಾಗಿರುತ್ತದೆ. ನಮ್ಮ ಅತ್ತೆಯ ಹಿಸ್ಸೆ ಯಾವ ಬಾಗಕ್ಕೆ ಎಂದು ಇಂದು ತೀರ್ಮಾನ ಆಗಿರಲಿಲ್ಲ. ನಮ್ಮ ಅತ್ತೆ ಕೆಳ ನ್ಯಾಯಾಲಯ ಮಾಡಿದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರು ಎನ್ನುವದು ನನಗೆ ಗೊತ್ತಿಲ್ಲ. ಮೇಲ್ಮನವಿ ಸಲ್ಲಿಸಿದ ನಂತರ ಪ್ರಕರಣ ಚಾಲ್ತಿಯಲ್ಲಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ನಿಜ.

ನಿಪಿ-**1** ರಂತೆ ಫೋಟೋ ತೆಗೆಯುವಾಗ ನಾನು ಸರ್ವೆಯವರನ್ನು ಕರೆದುಕೊಂಡು ಮಿಶ್ರಿಕೋಟಿ ಜಾಗಕ್ಕೆ ಕರೆದುಕೊಂಡು ಹೋಗಿದ್ದೆ, ಒಟ್ಟು **3** ಸಲ ನಾನು ಸ್ಥಳಕ್ಕೆ ಹೋಗಿದ್ದೆ. ನಮ್ಮ ಅತ್ತಿಗೆ ಸೇರಿದ ಹಿಸ್ಸೆ ಸೂರ್ಯ ಹುಟ್ಟುವ ದಿಕ್ಕಿನ ಕಡೆಗೆ ಇದ್ದು ಆಗ ಅಳತೆ ಮಾಡಲು ಕೊಟ್ಟಿರುವುದಿಲ್ಲ, **3** ಸಲ ಹೋದರು ಅಳತೆ ಮಾಡಲು ಬಿಟ್ಟಿರುವುದಿಲ್ಲ. ನಿಪಿ-**3** ರಲ್ಲಿರುವ ಹೆಬ್ಬೆಟ್ಟಿನ ಗುರುತು ನಮ್ಮ ಅತ್ತಿಗೆ ಸೇರಿದ್ದಲ್ಲ ಅಂದರೆ ಸರಿಯಲ್ಲ. ಬಕ್ಷಿಸ ಪತ್ರವನ್ನು ನಾನು ನನ್ನ ಅನುಕೂಲಕ್ಕೆ ತಕ್ಕಂತೆ ಬರೆದುಕೊಂಡಿದ್ದೇನೆ ಅಂದರೆ ಸರಿಯಲ್ಲ. ನಿಪಿ-**3** ಕ್ಕೆ ನಾನು ಸಹಿ ಮಾಡಿದ್ದೇನೆ. ನಾನು ಹಾಜರ ಪಡಿಸಿದ ನಿಪಿ-**3** ರ ಪ್ರತಿಯಲ್ಲಿ ಹೆಬ್ಬೆಟ್ಟಿನ ಗುರುತನ್ನು ಯಾರು ಗುರಿತಿಸಿದ್ದಾರೆ ಎನ್ನುವದರ ಬಗ್ಗೆ ನಮೂದಿಸಿಲ್ಲ, ಅದನ್ನು ಯಾರು ಗುರುತಿಸಿದ್ದಾರೆ ಎನ್ನುವದರ ಬಗ್ಗೆ ನಮೂದ ಇರುವುದಿಲ್ಲ. ಮೃತ ಅರ್ಜಿದಾರಳ ಹಿಸ್ಸೆ ಯಾವ ಬಾಗದಲ್ಲಿ ಬರುತ್ತದೆ ಎಂದು ಇನ್ನು ನಿರ್ಧಾರವಾಗಿಲ್ಲ ಆದ್ದರಿಂದ ಅವರ ಪಾಲಿನ ಆಸ್ತಿ ಎಲ್ಲಿ ಬರುತ್ತದೆ ಎಂದು ಹೇಳಲು ಬರುವುದಿಲ್ಲ ಅಂದರೆ ಸರಿಯಲ್ಲ. ನಮ್ಮ ಅತ್ತೆ ಸಿವಿಲ್ ನ್ಯಾಯಾಲಯ ಮಾಡಿದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದಾರೆ ಅಂದರೆ ನಿಜ. ಬಕ್ಷಿಸ ಪತ್ರವನ್ನು ನಮ್ಮ ಅತ್ತೆ ನಮ್ಮ ಹೆಸರಿಗೆ ಮಾಡಿಕೊಡುವ ಪ್ರಮಯ ಇರುವುದಿಲ್ಲ ಅಂದರೆ ಸರಿಯಲ್ಲ. ಎದುರುದಾರರು ನಮ್ಮ ಅತ್ತೆಯ ನೇರವಾರಸುದಾರರು ಆಗಿರುತ್ತಾರೆ ಆದ್ದರಿಂದ ನನ್ನ ಹೆಸರಿಗೆ ಬಕ್ಷಿಸ ಪತ್ರ ಬರೆದುಕೊಡಲು ಬುರವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನೋಡಿಕೊಂಡಿದ್ದರಿಂದ ನನ್ನ ಹೆಸರಿಗೆ ಮಾಡಿರುತ್ತಾರೆ ಅನ್ನುತ್ತಾರೆ. ನಿಪಿ-**3** ಕಾನೂನುಬದ್ದವಲ್ಲ ಅಂದರೆ ಸರಿಯಲ್ಲ. ನಮ್ಮ ಅತ್ತೆಯ ಪಾಲು ಎದುರುದಾರರಿಗೆ ಹೋಗುತ್ತದೆ ಎಂದು ನಾನು ನಿಪಿ-**3** ನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. ಬಕ್ಷಿಸ ಪತ್ರ ಖೊಟ್ಟಿ ಆದ ದಾಖಲೆ ಆದ್ದರಿಂದ ಅದನ್ನು ನೋಂದಣಿ ಮಾಡಿಲ್ಲ ಅಂದರೆ ಸರಿಯಲ್ಲ. ಎದುರುದಾರರ ಪಾಲನ್ನು ಎತ್ತಿಹಾಕುವ ಸಲುವಾಗಿ ನಿಪಿ-**3** ನ್ನು ನಾನು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ. ಅರ್ಜಿದಾರಳ ಕಾನೂನುಬದ್ದ ವಾರಸುದಾರರು ಎದುರುದಾರರಾಗಿದ್ದು ನನಗೆ ಆಸ್ತಿಯಲ್ಲಿ ಯಾವುದೆ ಹಕ್ಕು ಹಿತಾಸಕ್ತಿ ಇಲ್ಲ ಅಂದರೆ ಸರಿಯಲ್ಲ. ನಿಪಿ-**3** ರಲ್ಲಿಯ ಅಂಶಗಳನ್ನು ಸುಳ್ಳು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.

ಆರ್ ಎ **ನಂ. 8/2023**
ಪಿ. **ಡಬ್ಲ್ಯೂ: 01**